# Gap Inc.

# ಮಾರಾಟಗಾರರ ನೀತಿ ಸಂಹಿತೆ

**ಮಾರಾಟಗಾರರ ಈ ನೀತಿ ಸಂಹಿತೆ,  Gap Inc. ಗಾಗಿ ವಸ್ತುಗಳನ್ನು ಉತ್ಪಾದಿಸುವ ಎಲ್ಲಾ ಸಂಸ್ಥೆಗಳು, ಅವುಗಳ ಸಹ ಸಂಸ್ಥೆಗಳು, ವಿಭಾಗಗಳು ಅಥವಾ Gap Inc. ಏಜೆಂಟರುಗಳಿಗೆ ಅನ್ವಯಿಸುತ್ತದೆ.**

ವಿವಿಧ ಕಾನೂನು ಹಾಗೂ ಸಾಂಸ್ಕೃತಿಕ ಪರಿಸರಗಳಲ್ಲಿ ವಿಶ್ವದಾದ್ಯಂತ ಕಾರ್ಯನಿರ್ವಹಿಸುವ ಸಂಸ್ಥೆಗಳನ್ನು Gap Inc. ಗುರುತಿಸುತ್ತದೆಯಾದರೂ, ತನ್ನೊಂದಿಗೆ ವ್ಯಾಪಾರ ನಡೆಸುವ ಸಲುವಾಗಿ ಎಲ್ಲಾ ಸಂಸ್ಥೆಗಳೂ ಪೂರೈಸಬೇಕಾದಂತಹ ಕೆಲವು ಮೂಲಭೂತ ಅಗತ್ಯಗಳಿರುವ ನೀತಿ ಸಂಹಿತೆಯೊಂದನ್ನು  Gap Inc. ಸ್ಥಾಪಿಸಿದೆ. ಈ ಸಂಹಿತೆಯು, ವಿಶ್ವ ಕಾರ್ಮಿಕ ಸಂಸ್ಥೆ (ಐಎಲ್‌ಒ)ಯ ಮೂಲ ಆಚಾರ ಒಳಗೊಂಡಂತೆ, ಅಂತರರಾಷ್ಟ್ರೀಯವಾಗಿ  ಸ್ವೀಕಾರಾರ್ಹವಾದ ಕಾರ್ಮಿಕ ದರ್ಜೆಗಳು, ಮತ್ತು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಮೇಲೆ ಆಧರಿಸಲ್ಪಟ್ಟಿದೆ. ಸಂಸ್ಥೆಗಳ ನೇಮಕಾತಿ ಪದ್ಧತಿಗಳು ಮತ್ತು ಪಾರಿಸರಿಕ ಅನುಸರಣೆಗಳ ಕುರಿತು  Gap Inc. ನ ಸತತ ಮೌಲ್ಯ ಮಾಪನಕ್ಕಾಗಿ ಈ ಸಮೀಕ್ಷೆ ಒಂದು ಭದ್ರ ಬುನಾದಿ ಒದಗಿಸುತ್ತದೆ.

## I. ಕಾನೂನುಗಳ ಅನುಸರಣೆ

Gap Inc. ಜೊತೆಗೆ ವ್ಯವಹಾರ ಮಾಡುವಾಗಿನ ಒಂದು ಷರತ್ತಿನ ಪ್ರಕಾರ, ಪ್ರತಿಯೊಬ್ಬ ಮಾರಾಟಗಾರ ಈ ಮಾರಾಟಗಾರ ನೀತಿ ಸಂಹಿತೆಯನ್ನು ಅನುಸರಿಸಬೇಕು. ಅಂಗೀಕಾರವನ್ನು ಮೌಲ್ಯಮಾಪನ ಮಾಡಲು ಮತ್ತು ಖಚಿತಪಡಿಸಿಕೊಳ್ಳಲು Gap Inc. . ಮೌಲ್ಯಮಾಪನ ಮತ್ತು ಪರಿಹಾರ ವ್ಯವಸ್ಥೆಗಳ ಅಭಿವೃದ್ಧಿಯನ್ನು ಮುಂದುವರಿಸುತ್ತದೆ. Gap Inc. ಮತ್ತು ಸ್ಥಳೀಯ ಕಾನೂನಿನ ಪ್ರಕಾರ ಅವಶ್ಯಕತೆಗಳಲ್ಲಿ ವ್ಯತ್ಯಾಸವಿದ್ದರೆ, ಹೆಚ್ಚು ಕಟ್ಟುನಿಟ್ಟಾದ ಅವಶ್ಯಕತೆ COVC ಅನ್ವಯವಾಗಬೇಕು. ಮಾರಾಟಗಾರ ಮತ್ತು ಮಾರಾಟಗಾರ ಅಂಗಸಂಸ್ಥೆಗಳು ವಸ್ತುಗಳ ಉತ್ಪಾದನೆಗೆ Gap Inc. ಅನುಮೋದಿಸಿದ ಸೌಲಭ್ಯಗಳನ್ನು ಮಾತ್ರ ಬಳಸಬೇಕು.  ಮಾರಾಟಗಾರರು ಉತ್ಪಾದನೆಯ ಆರಂಭಕ್ಕೆ ಮೊದಲು ಈ ಸೌಲಭ್ಯಗಳನ್ನು ಬಳಸಲು Gap Inc. ನ  ಬರಹರೂಪದ ಮಂಜೂರಾತಿ ಪಡೆಯಬೇಕು.

## II. ಪರಿಸರ

ಸಂಸ್ಥೆಗಳು ಅನ್ವಯವಾಗುವ ಎಲ್ಲಾ ಪಾರಿಸರಿಕ ಕಾನೂನು ಮತ್ತು ನಿಯಮಾವಳಿಗಳನ್ನು ಅನುಸರಿಸಬೇಕು. ಸಂಸ್ಥೆಗಳು-ಶಕ್ತಿ ಮತ್ತು ಹಸಿರುಮನೆ ಅನಿಲದ (GHG  ಹೊರಸೂಸುವಿಕೆ, ವಾಯು ಮಾಲಿನ್ಯ (ಗಾಳಿಯ ಹೊರಸೂಸುವಿಕೆ), ನೀರಿನ ಬಳಕೆ, ನೀರಿನ ಗುಣಮಟ್ಟ, ತಾಜ್ಯ ನೀರು, ತ್ಯಾಜ್ಯ ಬದಲಿಕೆ ಮತ್ತು ವಿಲೇವಾರಿ ಹಾಗೂ ರಾಸಾಯನಿಕ ಬಳಕೆ ಮತ್ತು ನಿರ್ವಹಣೆ ಸೇರಿದಂತೆ ಪರಿಸರದ ಮೇಲಿನ ತಮ್ಮ ಪ್ರಭಾವವನ್ನು ಸೂಕ್ತವಾಗಿ ನಿರ್ವಹಿಸಬೇಕು.

## III. ಕಾರ್ಮಿಕರು

### ಎ. ಬಾಲ ಕಾರ್ಮಿಕರು

ಕಾನೂನುಬದ್ಧವಾದ ಕನಿಷ್ಠ ವಯೋಮಿತಿ ಅಥವಾ 15 ವರ್ಷಗಳು - ಇವೆರಡರಲ್ಲಿ ಯಾವುದು ಅಧಿಕವೋ ಅಷ್ಟು ವರ್ಷಗಳಾದವರನ್ನು ಮಾತ್ರ ಸಂಸ್ಥೆಗಳು, ಉದ್ಯೋಗಕ್ಕೆ ನೇಮಿಸಿಕೊಳ್ಳಬೇಕು. ಅನ್ವಯವಾಗುವ ಇತರ ಎಲ್ಲಾ ಬಾಲ ಕಾರ್ಮಿಕರು ಕಾನೂನುಗಳನ್ನೂ ಸೌಲಭ್ಯಗಳು ಪಾಲಿಸಬೇಕು. Gap Inc.ನ ಕನಿಷ್ಠ ವಯೋಮಿತಿ 15 ಅಥವಾ ಕನಿಷ್ಠ ಕಾನೂನು ವಯೋಮಿತಿಗಳೆರಡನ್ನೂ ಎಲ್ಲಾ ಭಾಗೀದಾರರೂ ಪೂರೈಸಿದಲ್ಲಿ, ಸಂಸ್ಥೆಗಳು ತಮ್ಮ ಕಾರ್ಮಿಕರ ಶೈಕ್ಷಣಿಕ ಅನುಕೂಲಕ್ಕಾಗಿ, ಕಾನೂನುಬದ್ಧ ಕಾರ್ಯಸ್ಥಳ ಒಪ್ಪಂದ ತರಬೇತಿ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲು ಉತ್ತೇಜಿಸಲಾಗಿದೆ.

### ಬಿ. ವಿದೇಶಿ ಗುತ್ತಿಗೆ ಕಾರ್ಮಿಕರ ಅಗತ್ಯಗಳು

ವಿದೇಶಿ ಗುತ್ತಿಗೆ ಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳುವ ಅಥವಾ ಬಳಸಿಕೊಳ್ಳುವ ಸಂಸ್ಥೆಗಳು, ತಮ್ಮ ಸ್ಥಳೀಯ ಕಾರ್ಮಿಕರಿಗೆ ಸಮನಾಗಿ ಈ ಕಾರ್ಮಿಕರನ್ನು ಕೂಡ ಗೌರವದಿಂದ ನಡೆಸಿಕೊಳ್ಳುವುದನ್ನು ಖಚಿತಪಡಿಸಬೇಕು. ವಲಸೆ ಕಾರ್ಮಿಕರು  ರೂಪದ ಬಲವಂತದ, ಕಡ್ಡಾಯದ, ಬಂಧಿಸಲ್ಪಟ್ಟ ಮತ್ತು ಕರಾರಿನ ಪದ್ಧತಿಗೆ ಒಳಪಡುವಂತಿಲ್ಲ. ಎಲ್ಲಾ ಕೆಲಸವೂ ಸ್ವಯಂ ಪ್ರೇರಿತವಾಗಿರಬೇಕು ಮತ್ತು ಕಾರ್ಮಿಕರು ಯಾವುದೇ ಸಮಯದಲ್ಲಿ, ಯಾವುದೇ ದಂಡವಿಲ್ಲದೇ ತಮ್ಮ ಉದ್ಯೋಗದಿಂದ ಬಿಡುಗಡೆ ಹೊಂದಲು ಮುಕ್ತ ಅವಕಾಶ ಇರಬೇಕು. ವಲಸೆ ಕಾರ್ಮಿಕರಿಗೆ (ಅಥವಾ ಅವರ ಕುಟುಂಬ ಸದಸ್ಯರಿಗೆ) ದೋಷಣೆಯ ಬೆದರಿಕೆ ಅಥವಾ ಅವರ ಉದ್ಯೋಗವನ್ನು ಕಿತ್ತುಕೊಳ್ಳುವ ಅಥವಾ ಅವರಾಗಿಯೇ ಉದ್ಯೋಗ ಬಿಟ್ಟು ಹೋಗುವಂತಹ ಒತ್ತಡಗಳನ್ನು ಹೇರಬಾರದು.

### ಸಿ. ತಾರತಮ್ಯ

ಸಂಸ್ಥೆಗಳು, ಕಾರ್ಮಿಕರನ್ನು ಉದ್ಯೋಗ ನಿರ್ವಹಿಸಲು ಅವರ ಸಾಮರ್ಥ್ಯದ ಆಧಾರದ ಮೇಲೆ ಅವರನ್ನು ನೇಮಕಾತಿ ಮಾಡಿಕೊಳ್ಳಬೇಕೆ ಹೊರತು ಅವರ ವೈಯಕ್ತಿಕ ಗುಣವಿಶೇಷತೆ ಅಥವಾ ನಂಬಿಕೆಗಳ ಆಧಾರದ ಮೇಲಲ್ಲ.

### ಡಿ. ಬಲವಂತದ ದುಡಿಮೆ

ಸಂಸ್ಥೆಗಳು ಯಾವುದೇ ರೀತಿಯ ಅನೈಚ್ಛಿಕ ಕಾರ್ಮಿಕರನ್ನು  ಅಂದರೆ ಸರ್ಕಾರಗಳ ಕಾರಾಗೃಹ ಕಾರ್ಮಿಕರು, ಸಾಲದ ಬಂಧನ ಅಥವಾ ಒತ್ತಾಯದ ಕಾರ್ಮಿಕರನ್ನು ಉದ್ಯೋಗಕ್ಕೆ ಇಟ್ಟುಕೊಳ್ಳಬಾರದು.

### ಇ. ಸಂಘಟನೆಯ ಸ್ವಾತಂತ್ರ್ಯ

ಕಾರ್ಮಿಕರು ತಾವು ಇಚ್ಛಿಸಿದ ಸಂಘಟನೆಗಳಿಗೆ ಸೇರಿಸಿಕೊಳ್ಳಬಹುದು ಕಾನೂನುಬದ್ಧವಾಗಿ ಮತ್ತು  ಶಾಂತಿಯುತವಾಗಿ ಸಂಘಟಿತರಾಗಬಯಸುವ ಅಥವಾ ಚೌಕಾಶಿ ಮಾಡಬಯಸುವ ಕಾರ್ಮಿಕರ ನಡುವೆ ಸಂಸ್ಥೆಗಳು ಹಸ್ತಕ್ಷೇಪ ಮಾಡಬಾರದು. ಆ ರೀತಿ ಮಾಡಬಹುದೆ ಬೇಡವೆ ಎಂಬುದನ್ನು ಸಂಪೂರ್ಣವಾಗಿ ಕಾರ್ಮಿಕರ ಇಚ್ಛೆಗೇ ಬಿಟ್ಟುಬಿಡಬೇಕು.

### ಎಫ್  ಮಾನವೀಯ ವರ್ತನೆ

ಸಂಸ್ಥೆಗಳು ಎಲ್ಲಾ ಕಾರ್ಮಿಕರನ್ನು ಗೌರವಯುತವಾಗಿ ಮತ್ತು ಘನತೆಯಿಂದ ನಡೆಸಿಕೊಳ್ಳಬೇಕು. ಸಂಸ್ಥೆಗಳು, ದೈಹಿಕ ಶಿಕ್ಷೆ ನೀಡಬಾರದು ಮತ್ತು ಯಾವುದೇ ರೀತಿಯ ದೈಹಿಕ ಅಥವಾ ಮಾನಸಿಕ ಘರ್ಷಣೆ ಏರ್ಪಡುವಂತೆ ನಡೆದುಕೊಳ್ಳಬಾರದು.

### ಜಿ  ವೇತನ ಹಾಗು ಸೌಲಭ್ಯಗಳು ಮತ್ತು ಉದ್ಯೋಗದ ನಿಯಮಗಳು

ಸಂಸ್ಥೆಗಳು, ಅನ್ವಯವಾಗುವ ಎಲ್ಲಾ ಕಾನೂನುಗಳ ಪ್ರಕಾರ, ವೇತನ ಮತ್ತು ಹೆಚ್ಚುವರಿ ಅವಧಿ ವೇತನವನ್ನು ನೀಡಬೇಕು. ಕನಿಷ್ಠ ಕಾನೂನು ಬದ್ಧ ವೇತನ ಅಥವಾ ಸ್ಥಳಿಯ ಔದ್ಯಮಿಕ ದರ್ಜೆಗಳಿಗೆ  ಸರಿಸಮನಾಗಿರುವ ಮೇತನಗಳು - ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಸೌಲಭ್ಯಗಳು ಕಾರ್ಮಿಕರಿಗೆ ನೀಡಬೇಕು. ನೌಕರರ ಮೂಲ ಅಗತ್ಯಗಳು ಮತ್ತು ಕೆಲವೊಂದು ಪ್ರತ್ಯೇಕ ಆದಾಯವನ್ನು ಪೂರೈಸಲು ಸಾಕಾಗುವಷ್ಟು ವೇತನ ಹಾಗು ಸೌಲಭ್ಯಗಳನ್ನು ಸಂಸ್ಥೆಗಳು ಒದಗಿಸಬೇಕು.

### ಎಚ್. ಕೆಲಸದ ಅವಧಿ

ಅನ್ವಯವಾಗುವ ಎಲ್ಲಾ ಕಾನೂನುಗಳ ಪ್ರಕಾರ ಕೆಲಸದ ವೇಳೆಯನ್ನು ಸಂಸ್ಥೆಗಳು ನಿಗದಿಪಡಿಸಬೇಕು  ವಸ್ತ್ರ ತಯಾರಿಕೆ ಉದ್ಯಮದಲ್ಲಿ ಹೆಚ್ಚುವರಿ ಕೆಲಸದ ವೇಳೆಯು ಅಗತ್ಯವಾಗುತ್ತದೆಯಾದರೂ, ಮಾನವಿಯ ಮತ್ತು ಉತ್ಪಾದಕ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸುವ ಮಟ್ಟದಲ್ಲಿ ಸಂಸ್ಥೆಗಳು ಇಂತಹ ಹೆಚ್ಚುವರಿ ಕೆಲಸದ ಅವಧಿಗಳನ್ನು ಸೀಮಿತಗೊಳಿಸಬೇಕು.

## IV. ಕೆಲಸದ ಪರಿಸ್ಥಿತಿ

### ಎ. ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತೆ

ಕೆಲಸದ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ, ಸಂಸ್ಥೆಗಳು ಅನ್ವಯವಾಗುವ ಎಲ್ಲಾ ಕಾನೂನುಗಳನ್ನು ಪಾಲಿಸಿ  ಕಾರ್ಮಿಕರಿಗೆ ಸುರಕ್ಷಿತ ಮತ್ತು ಆರೋಗ್ಯಕರ ಪರಿಸ್ಥಿತಿಯನ್ನು ಒದಗಿಸಿಕೊಡಬೇಕು.

### ಬಿ ವಸತಿ ನಿಲಯ (ಅನ್ವಯವಾಗುವುದಾದರೆ)

ಕಾರ್ಮಿಕರಿಗೆ ವಸತಿ ಒದಗಿಸಿಕೊಡುವ ಸಂಸ್ಥೆಗಳು, ಈ ಸೌಲಭ್ಯಗಳನ್ನು ಶುಚಿಯಾಗಿ ಹಾಗೂ ಸುರಕ್ಷಿತವಾಗಿ ಇಡಬೇಕು

## V. ನಿರ್ವಹಣಾ ವ್ಯವಸ್ಥೆ

ಸಂಸ್ಥೆಗಳು - ಅನ್ವಯಿಸುವ ಕಾನೂನುಗಳು, ನಿಯಮಗಳ ಅನುಸರಿಸುವುದನ್ನು ಖಚಿತಪಡಿಸಲು ಸೂಕ್ತ ಕಾರ್ಯಾಚರಣೆಯ ನಿಯಂತ್ರಣಗಳೊಂದಿಗೆ ವಿನ್ಯಾಸಗೊಳಿಸಲಾದ ಸಮರ್ಥನೀಯ ನಿರ್ವಹಣಾ ವ್ಯವಸ್ಥೆಗಳನ್ನು ಸ್ಥಾಪಿಸಬೇಕು ಹಾಗೂ COVC. ನಿರ್ವಹಣಾ ವ್ಯವಸ್ಥೆಗಳು ಸಂರಕ್ಷಣಾ ಅಪಾಯಗಳನ್ನು ಗುರುತಿಸಬೇಕು ಮತ್ತು ನಿಯಂತ್ರಿಸಬೇಕು ಹಾಗೂ ನಿರಂತರ ಸುಧಾರಣೆಯನ್ನು ಕಲ್ಪಿಸಬೇಕು.

GAP  BANANA REPUBLIC  OLD NAVY  ATHLETA